# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಂ.ಸ.ಕಾ.[illegible]/ಕೋ.ಉ.ವಿ/ಪಿ.ಆರ್/30 /2022-23

ಸಹಾಯಕ ಕಾರ್ಯಪಾಲಕ ಅಭಿಯಂತರರರ ಕಛೇರಿ,
ಕೋರಮಂಗಲ ಉಪವಿಭಾಗ,
ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ,
5ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು, ದಿನಾಂಕ: 22-08-2022

## ಸಭೆ ಸೂಚನಾ ಪತ್ರ

ಮಾನ್ಯ ಆಯುಕ್ತರು ರವರ ಕಛೇರಿ ಆದೇಶ ಸಂಖ್ಯೆ.ಬಿ12(5)/ಪಿಆರ್/35/2020-21, ದಿನಾಂಕ:21-09-2020ರ ರೀತ್ಯಾ ವಾರ್ಡ್ ಸಂಖ್ಯೆ.173 (ಜಕ್ಕಸಂದ್ರ) ವ್ಯಾಪ್ತಿಯ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ **ದಿನಾಂಕ:24.08.2022 ರಂದು ಬೆಳಗ್ಗೆ 11.00 ಕ್ಕೆ ಸ್ಥಳ: ಗ್ರಂಥಾಲಯ ಕಟ್ಟಡ, ಉದ್ಯಾನವನ ಹತ್ತಿರ, ಹೆಚ್.ಎಸ್.ಆರ್. 5ನೇ ಸೆಕ್ಟರ್, ಜಕ್ಕಸಂದ್ರ, (ಜಕ್ಕಸಂದ್ರ ವಾರ್ಡ್ ಕಛೇರಿ, ಬಿ.ಬಿ.ಎಂ.ಪಿ) ಬೆಂಗಳೂರು** ಇಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಸಮಿತಿ ಸಭೆಯನ್ನು ನಡೆಸಲು ನಿರ್ಧರಿಸಲಾಗಿದ್ದು, ಸದರಿ ದಿನಾಂಕದಂದು ತಾವುಗಳು ತಪ್ಪದೇ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ ಹಾಗೂ ಹಿಂದಿನ ಸಭೆಯ ನಡವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದ್ದು, ತಮ್ಮ ವ್ಯಾಪ್ತಿಗೆ ಬರುವಂತಹ ವಿಷಯಗಳ ಬಗ್ಗೆ ಅನುಷ್ಠಾನ ವರದಿಯೊಂದಿಗೆ ಸಭೆಗೆ ಹಾಜರಾಗಲು ಕೋರಿದೆ. ತಮ್ಮ ಗೈರುಹಾಜರಿಯ ಬಗ್ಗೆ ಮಾನ್ಯ ಆಯುಕ್ತರು ರವರ ಗಮನಕ್ಕೆ ತರಲಾಗುವುದು.

22/08/2022

ಕಾರ್ಯದರ್ಶಿ, ವಾರ್ಡ್ ಸಮಿತಿ & ಸಹಾಯಕ ಅಭಿಯಂತರರು
ವಾರ್ಡ್ ನಂ.173 ಜಕ್ಕಸಂದ್ರ

ಪ್ರತಿಯನ್ನು:-

1. ಜಂಟಿ ಆಯುಕ್ತರು, ದಕ್ಷಿಣ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ದಕ್ಷಿಣ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು, ಬಿ.ಟಿ.ಎಂ. ಲೇಔಟ್, ಬಿ.ಬಿ.ಎಂ.ಪಿ
4. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ವಲಯ ರವರಿಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ಬಿ.ಟಿ.ಎಂ. ಲೇಔಟ್ ವಿಭಾಗ ರವರಿಗೆ ಸಲ್ಲಿಸುತ್ತಾ, ವಾರ್ಡ್‌ನ ಆರೋಗ್ಯ ಪರಿವೀಕ್ಷಕರು ಹಾಗೂಘನತ್ಯಾಜ್ಯ ನಿರ್ವಹಣೆಯ ಗುತ್ತಿಗೆದಾರರೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
7. ಸಹ ಕಂದಾಯ ಅಧಿಕಾರಿಗಳು, ಕಂದಾಯ ಇಲಾಖೆ, ಕೋರಮಂಗಲ
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಬೆಂಗಳೂರು.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ನಿರ್ವಹಣೆ, ಬಿ.ಬಿ.ಎಂ.ಪಿ
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಬೆಂಗಳೂರು
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ, ದಕ್ಷಿಣ ವಲಯ , ಬೆಂಗಳೂರು
12. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ದಕ್ಷಿಣ ವಲಯ, ಬೆಂಗಳೂರು.
13. ಆರಕ್ಷಕ ನಿರೀಕ್ಷಕರು, ಮಡಿವಾಳ ಪೋಲಿಸ್ ಠಾಣೆ ರವರಿಗೆ ಸಲ್ಲಿಸಿ, ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
14. ಆರಕ್ಷಕ ನಿರೀಕ್ಷಕರು, ಸಂಚಾರ ಪೋಲಿಸ್ ಠಾಣೆ, ಮಡಿವಾಳ ರವರಿಗೆ ಸಲ್ಲಿಸಿ, ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
15. ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್, ಜಕ್ಕಸಂದ್ರ ವಾರ್ಡ್-173
16. ಕಛೇರಿ ಕಡತಕ್ಕೆ.

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೋರಮಂಗಲ ಉಪ-ವಿಭಾಗದ ಜಕ್ಕಸಂದ್ರ ವಾರ್ಡ್ ಸಂಖ್ಯೆ-173 ದಿನಾಂಕ:24.08.2022 ರಂದು ಆಗಸ್ಟ್-2022 ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಶ್ರೀ ಹೆಚ್.ಕೆ. ಸೋಮಶೇಖರಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173ರ ರವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಕಟ್ಟಡ, ಉದ್ಯಾನವನ ಹತ್ತಿರ, ಹೆಚ್.ಎಸ್.ಆರ್. 5ನೇ ಸೆಕ್ಟರ್, ಜಕ್ಕಸಂದ್ರ, (ಜಕ್ಕಸಂದ್ರ ವಾರ್ಡ್ ಕಛೇರಿ, ಬಿ.ಬಿ.ಎಂ.ಪಿ) ಬೆಂಗಳೂರು ದಿನಾಂಕ:24.08.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದವರು:-**

1. ಶ್ರೀ ಎಂ.ಎ. ಪೊನ್ನಪ್ಪ
2. ಶ್ರೀಮತಿ ಶೈಲಾ
3. ಶ್ರೀಮತಿ ಆರ್.ಜಿ. ಗಿರಿಜಾ
4. ಶ್ರೀಮತಿ ಜ್ಯೋತಿ ಜಿ. ಪ್ರಭು
5. ಶ್ರೀ ಜಿ.ಎಸ್. ಹೊಳ್ಳ
6. ಶ್ರೀಮತಿ ಅಕಿಲಾ
7. ಡಾ॥ ವಿವೇಕ್ ಎಲ್.ಎಸ್
8. ಶ್ರೀಮತಿ ಪ್ರೇಮ
9. ಶ್ರೀಮತಿ ಸರಸ್ವತಮ್ಮ

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಹೆಚ್.ಕೆ. ಸೋಮಶೇಖರಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು) ಮತ್ತು ನೋಡಲ್ ಅಧಿಕಾರಿಗಳು
2. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-173 ಜಕ್ಕಸಂದ್ರ
3. ಶ್ರೀ ಮೊಹಮ್ಮದ್ ಶಾದಬ್ ಹೈದರ್, ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ ದೇವರಾಜು, ಎ.ಎಸ್.ಐ. ಮಡಿವಾಳ ಪೊಲೀಸ್ ಸ್ಟೇಷನ್
5. ಶ್ರೀ ರಾಕೇಶ್, ಅರಣ್ಯ ಘಟಕ, ಬಿ.ಬಿ.ಎಂ.ಪಿ
6. ಶ್ರೀ ಎನ್. ದಿನೇಶ್, ಎ.ಎಸ್.ಐ., ಮಡಿವಾಳ ಸಂಚಾರ ಪೊಲೀಸ್ ಠಾಣೆ
7. ಶ್ರೀ ಧರಣೇಶ್ ಕುಮಾರ್ ಹೆಚ್.ಬಿ., ಮಡಿವಾಳ ಸಂಚಾರ ಪೊಲೀಸ್ ಠಾಣೆ
8. ಶ್ರೀ ವಿನಯ್ ಕೆ.ಎಸ್., ಸಹಾಯಕ ಅಭಿಯಂತರರು, ಬೆಸ್ಕಾಂ
9. ಶ್ರೀ ನವೀನ್ .ಎಸ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
10. ಶ್ರೀ ಅರವಿಂದ .ಆರ್, ಕಿರಿಯ ಆರೋಗ್ಯ ಪರಿವೀಕ್ಷಕರು
11. ಶ್ರೀ ಸಂಜೀವಕುಮಾರ್, ಬಿ.ಬಿ.ಎಂ.ಪಿ. ಸೂಪರ್‌ವೈಸರ್
12. ಶ್ರೀ ಮಂಜುನಾಥ್, ಮಾರ್ಷಲ್

* * * * *

ಶ್ರೀ ಹೆಚ್.ಕೆ. ಸೋಮಶೇಖರಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.



Scanned with CamScanner

ಶ್ರೀಮತಿ ಜ್ಯೋತಿ ಪ್ರಭಾ ರವರು ಮಾತನಾಡಿ, 11ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆಯಲ್ಲಿ ರಸ್ತೆ ಗುಂಡಿ ಇರುತ್ತದೆ. ಇದರಿಂದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ರಸ್ತೆ ಗುಂಡಿಯನ್ನು ಮುಚ್ಚಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಕೋರಮಂಗಲ ಉಪವಿಭಾಗ**

ಶ್ರೀಮತಿ ಜ್ಯೋತಿ ಪ್ರಭಾ ರವರು ಮಾತನಾಡಿ, ಪಾಟೀಲ್ ಟಿಂಬರ್ ಮತ್ತು ಹಳೆ ಆರೋಗ್ಯ ಹೋಟೆಲ್ ಹತ್ತಿರ ಬಿ.ಡಬ್ಲ್ಯೂಎಸ್.ಎಸ್.ಬಿ. ಕೊಳವೆ ಸಂಪರ್ಕ ಹಾನಿಗೊಂಡು ನೀರು ಸೋರಿಕೆಯಾಗುತ್ತಿರುತ್ತದೆ. ಆದುದರಿಂದ ಪರಿಶೀಲಿಸಿ, ದುರಸ್ಥಿ ಕಾರ್ಯವನ್ನು ಕೈಗೊಳ್ಳಬೇಕೆಂದು ಸಭೆಗೆ ತಿಳಿಸಿದರು ಹಾಗೂ ಸದರಿ ಜಾಗದಲ್ಲಿ ಉಂಟಾಗಿರುವ ರಸ್ತೆಗುಂಡಿಗಳನ್ನು ಮುಚ್ಚುವ ಮುನ್ನ ನೀರು ಸೋರಿಕೆಯನ್ನು ಸರಿಪಡಿಸಬೇಕೆಂದು ಬಿ.ಬಿ.ಎಂ.ಪಿ. ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಬಿ.ಡಬ್ಲ್ಯೂ.ಎಸ್.ಎಸ್.ಬಿ**

ಶ್ರೀಮತಿ ಸರಸ್ವತಮ್ಮ ರವರು ಮಾತನಾಡಿ, ಜಕ್ಕಸಂದ್ರ ವ್ಯಾಪ್ತಿಯಲ್ಲಿ ವಿದ್ಯುತ್ ಏರಿಳಿತವಾಗುತ್ತಿರುತ್ತದೆ. ಆದುದರಿಂದ ಬೆಸ್ಕಾಂ ಅಧಿಕಾರಿಗಳು ಇದನ್ನು ಸರಿಪಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಬೆಸ್ಕಾಂ**

ಶ್ರೀ ಎನ್. ದಿನೇಶ್, ಎ.ಎಸ್.ಐ. ರವರು ಮಾತನಾಡಿ, ನವೀನ್ ಕಿಚನ್ ಹತ್ತಿರ ಇರುವ ಬಿ.ಡಬ್ಲ್ಯೂಎಸ್.ಎಸ್.ಬಿ ಮ್ಯಾನ್‌ಹೋಲ್‌ನಿಂದ ಚರಂಡಿ ನೀರು ಉಕ್ಕಿ ರಸ್ತೆಯಲ್ಲಿ ಹರಿಯುತ್ತಿರುತ್ತದೆ. ಆದುದರಿಂದ ಸಂಬಂಧಪಟ್ಟ ಇಲಾಖೆಯವರು ಇದನ್ನು ಸರಿಪಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು ಹಾಗೂ ಬಿ.ಡಬ್ಲ್ಯೂಎಸ್.ಎಸ್.ಬಿ ರವರು ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳುವುದಾದರೆ ರಸ್ತೆಯಲ್ಲಿ ವಾಹನಗಳ ನಿರ್ಬಂಧಿಸಲು ಡೆಪ್ಯೂಟಿ ಕಮೀಷನರ್ ಆಫ್ ಪೊಲೀಸ್, ಸಂಚಾರ ವಿಭಾಗ, ಪೂರ್ವ ವಲಯ ಇವರಿಗೆ ಪತ್ರ ಬರೆಯಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಬಿ.ಡಬ್ಲ್ಯೂ.ಎಸ್.ಎಸ್.ಬಿ**

ಶ್ರೀ ಎನ್. ದಿನೇಶ್, ಎ.ಎಸ್.ಐ. ರವರು ಮಾತನಾಡಿ, ಮಡಿವಾಳ ಸಂಚಾರ ಪೊಲೀಸ್ ಠಾಣೆ ಹತ್ತಿರವಿರುವ ರಸ್ತೆ ಬದಿಯಲ್ಲಿ ಅವಶೇಷಗಳು ಹಾಗೂ ಹೂಳುಗಳು ಇರುತ್ತವೆ. ಆದುದರಿಂದ ಇವುಗಳನ್ನು ತೆರವುಗೊಳಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಕೋರಮಂಗಲ ಉಪವಿಭಾಗ**

ಶ್ರೀಮತಿ ಜ್ಯೋತಿ ಪ್ರಭಾ ರವರು ಮಾತನಾಡಿ, ಗ್ರೀನ್ ವ್ಯೂವ್ ಹಾಸ್ಪಿಟಲ್ ಹಿಂಭಾಗದಲ್ಲಿರುವ ರಸ್ತೆಯಲ್ಲಿ ಬೀದಿ ದೀಪದ ಕಂಬವಿದ್ದು, ಅದರಲ್ಲಿ ದೀಪವಿರುವುದಿಲ್ಲ. ಇದರಿಂದಾಗಿ ರಾತ್ರಿ ವೇಳೆಯಲ್ಲಿ ಸಾರ್ವಜನಿಕರು ಸಂಚರಿಸುವುದು ತುಂಬಾ ಕಷ್ಟಕರವಾಗಿರುತ್ತದೆ. ಆದುದರಿಂದ ರಸ್ತೆ ದೀಪ ಅಳವಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**(ಬೀದಿ ದೀಪಗಳು)**



Scanned with CamScanner

ಶ್ರೀಮತಿ ಪ್ರೇಮಾ ರವರು ಮಾತನಾಡಿ, ರಾಘವೇಂದ್ರ ಬೇಕರಿ, ಹೈಗೇಟ್ ಹತ್ತಿರ ಇರುವ ಬೋರ್‌ವೆಲ್ ಸ್ಥಗಿತಗೊಂಡಿರುತ್ತದೆ. ಆದುದರಿಂದ ಅದನ್ನು ಸರಿಪಡಿಸಬೇಕೆಂದು ಸಭೆಯಲ್ಲಿ ಕೋರಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೋರ್‌ವೆಲ್ ವಿಭಾಗ (ಬಿ.ಡಬ್ಲ್ಯೂ.ಎಸ್.ಎಸ್.ಬಿ)

ಶ್ರೀಮತಿ ಅಕಿಲಾ ರವರು ಮಾತನಾಡಿ, 5ನೇ ಅಡ್ಡರಸ್ತೆಯಲ್ಲಿ ರಸ್ತೆ ದೀಪವಿರುವುದಿಲ್ಲ, ಇದರಿಂದಾಗಿ ರಾತ್ರಿ ವೇಳೆಯಲ್ಲಿ ಸಾರ್ವಜನಿಕರು ಸಂಚರಿಸುವುದು ತುಂಬಾ ಕಷ್ಟಕರವಾಗಿರುತ್ತದೆ. ಆದುದರಿಂದ ರಸ್ತೆ ದೀಪ ಅಳವಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೀದಿ ದೀಪಗಳು

ಶ್ರೀಮತಿ ಸರಸ್ವತಮ್ಮ ಮತ್ತು ಪ್ರೇಮಾ ರವರು ಮಾತನಾಡಿ, ಹೈಗೇಟ್ ಹತ್ತಿರ ಸೊಳ್ಳೆಗಳ ಕಾಟ ಹೆಚ್ಚಾಗಿರುವುದರಿಂದ ಕ್ರಿಮಿ ನಾಶಕ ಸಿಂಪಡಣೆ ಮಾಡಬೇಕೆಂದು ಸಭೆಯಲ್ಲಿ ಕೋರಿದರು.

ಕ್ರಮ: ಆರೋಗ್ಯ ವೈದ್ಯಾಧಿಕಾರಿಗಳು
ಆರೋಗ್ಯ ಇಲಾಖೆ, ಬಿ.ಬಿ.ಎಂ.ಪಿ.

ಶ್ರೀ ಜಿ.ಎನ್. ಮೋಕ್ಷ ರವರು ಮಾತನಾಡಿ, ಜಕ್ಕಸಂದ್ರ ವಾರ್ಡ್ ಕಛೇರಿ ಹತ್ತಿರವಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ನ ಎತ್ತರವು ಕೆಳಮಟ್ಟದಲ್ಲಿದ್ದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಟ್ರಾನ್ಸ್‌ಫಾರ್ಮರ್ ಅನ್ನು ಎತ್ತರವನ್ನು ಏರಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೆಸ್ಕಾಂ

ಶ್ರೀ ಮೋನಪ್ಪ ರವರು ಮಾತನಾಡಿ, 14ನೇ ಮುಖ್ಯರಸ್ತೆಯಲ್ಲಿ ರಸ್ತೆ ದೀಪಗಳನ್ನು ಅಳವಡಿಸಿದ್ದು, ರಸ್ತೆ ದೀಪಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. ಆದುದರಿಂದ ಸಂಬಂಧಪಟ್ಟ ಇಲಾಖೆಯವರು ರಸ್ತೆ ದೀಪಗಳನ್ನು ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೀದಿ ದೀಪಗಳು

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಸದಸ್ಯ ಕಾರ್ಯದರ್ಶಿ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ([illegible]) | 24/8/22 |
| ಸದಸ್ಯ ಕಾರ್ಯದರ್ಶಿ | (ಶ್ರೀ ಹೆಚ್.ಕೆ. ಸೋಮ[illegible]) |
| ಹಾಗೂ ಸಹಾಯಕ ಅಭಿಯಂತರರು, | ನೋಡಲ್ ಅಧಿಕಾರಿಗಳು |
| ವಾರ್ಡ್-173 ಜಕ್ಕಸಂದ್ರ | ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು |
| | ವಾರ್ಡ್-173 ಜಕ್ಕಸಂದ್ರ |



Scanned with CamScanner

ಜಕ್ಕಸಂದ್ರ ವಾರ್ಡ್ ಸಂಖ್ಯೆ-173

ದಿನಾಂಕ: 24/08/2022

classmate

Date

Page

ಇಲಾಖಾ ಅಧಿಕಾರಿಗಳು

| | | |
|---|---|---|
| Md. Shadab Haider | Sr. H.I BBMP | Mohd Shadab |
| DEVARAJU ASI | Madivala police station | Devaraju |
| ಪಿ.ಡಬ್ಲ್ಯೂ.ಡಿ.ಇ ರಾಕೇಶ್ ಪ್ರಕಾಶ್ | | Rakesh P |
| N. Dinesh. ASi | madivala Traffic P.S. | [signature] |
| SANJEEV KUMAR | BBMP (supervisor) | ASI-7 [signature] |
| Saraswatham | B.B.M.P, Conser | [signature] |
| DHARANESKUMAR.H.B. | Madivala Traffic P.S. | [signature] |
| VINAY K.S | BESCOM-AE-HSR | Vinay [signature] |
| Naveen.S | BWSSB AE KMH | [signature] |
| Manjunath.p | Marshal | Manjunath P |
| Aravinda.R | JHI | Aravind R |

ಇಲಾಖಾ ನಿವಾಸಿಗಳು

| | |
|---|---|
| M. A. Ramappa | [signature] |
| Shyla | [signature] |
| D.G. Girija, | Girija |
| Jyothi G. Prabhu. | Jyothi G. Prabhu. |
| G.S. HOLLA. | [signature] |
| Akila | |
| Dr. VIVEK.C.S. | [signature] |
| Prema | |

Scanned with CamScanner